STD
9/3/22

ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ಸದಸ್ಯರ ಹೆಸರು	ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ)
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	1412
ಉತ್ತರಿಸಬೇಕಾದ ದಿನಾಂಕ	09.03.2022
ಉತ್ತರಿಸಬೇಕಾದ ಸಚಿವರು	ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಗದಗ ಬೆಟಗೇರಿ ನಗರಸಭೆ ವ್ಯಾಪ್ತಿಯಲ್ಲಿ ಪ್ರಧಾನ ಮಂತ್ರಿ ಆವಾಸ್ ಹಾಗೂ BLC ಯೋಜನೆ ಅಡಿ 2018 ರಿಂದ ಇಲ್ಲಿಯವರೆಗೆ ಎಷ್ಟು ಜನ ಬಡವರಿಗೆ ಅನುದಾನ ಬಿಡುಗಡೆ ಮಾಡಲಾಗಿದೆ;	ಗದಗ-ಬೆಟಗೇರಿ ನಗರಸಭೆ ವ್ಯಾಪ್ತಿಯಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ)-ಬಿ.ಎಲ್.ಸಿ ಘಟಕದಡಿ ಇಲ್ಲಿಯವರೆಗೆ 4,568 ಮನೆಗಳು ಅನುಮೋದನೆಗೊಂಡಿವೆ. ಈ ಪೈಕಿ 935 ಮನೆಗಳು ಪೂರ್ಣಗೊಂಡಿದ್ದು, 1,462 ಮನೆಗಳು ಪ್ರಗತಿಯಲ್ಲಿದೆ. ಈ ಮನೆಗಳಿಗೆ ಒಟ್ಟು ರೂ. 1,405.87 ಲಕ್ಷ ಬಿಡುಗಡೆ ಮಾಡಲಾಗಿದೆ. (ಕೆಳಗಿನ ಕೋಷ್ಟಕ ನೋಡಿ)

ರೂ. ಲಕ್ಷಗಳಲ್ಲಿ

ಘಟಕ	ಅನುಮೋದನೆಯಾದ ಮನೆಗಳು	ಪೂರ್ಣಗೊಂಡ ಮನೆಗಳು	ಪ್ರಗತಿಯಲ್ಲಿರುವ ಮನೆಗಳು	ಪ್ರಾರಂಭವಾಗಬೇಕಾದ ಮನೆಗಳು	ಬಿಡುಗಡೆಯಾದ ಮೊತ್ತ
Non convergence (ಕೇಂದ್ರ ಸರ್ಕಾರದ ಅನುದಾನ ಮಾತ್ರ)	863	83	96	684	119.62
Convergence (ರಾಜ್ಯ ಸರ್ಕಾರದ ವಸತಿ ಯೋಜನೆಗಳ ಸಮನ್ವಯತೆ)	3705	852	1366	1487	1286.25
ಒಟ್ಟು	**4568**	**935**	**1462**	**2171**	**1405.87**

ಕ್ರ. ಸಂ.	ಪ್ರಶ್ನೆ	ಉತ್ತರ
ಆ)	ಈ B.L.C ಯೋಜನೆ ಅಡಿ ಎಷ್ಟು ಮನೆಗಳು ಪೂರ್ಣಗೊಂಡಿವೆ; ಉಳಿದವುಗಳು ಯಾವ ಹಂತದಲ್ಲಿವೆ ; (ಸಂಪೂರ್ಣ ವಿವರ ನೀಡುವುದು)	ಗದಗ-ಬೆಟಗೇರಿ ನಗರಸಭೆ ವ್ಯಾಪ್ತಿಯಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಬಿ.ಎಲ್.ಸಿ ಘಟಕದಡಿ ಇಲ್ಲಿಯವರೆಗೆ ಒಟ್ಟು 4,568 ಮನೆಗಳು ಅನುಮೋದನೆಗೊಂಡಿದ್ದು, ಈ ಪೈಕಿ 935 ಮನೆಗಳು ಪೂರ್ಣಗೊಂಡಿವೆ, 1,462 ಮನೆಗಳು ಪ್ರಗತಿಯ ವಿವಿಧ ಹಂತಗಳಲ್ಲಿವೆ. 2,171 ಮನೆಗಳು ಪ್ರಾರಂಭವಾಗಬೇಕಿದೆ (ಹಿಂದಿನ ಸಾಲಿನಲ್ಲಿ ಅನುಮೋದನೆಗೊಂಡ ಮನೆಗಳ ಪ್ರಗತಿಯನ್ನು ಒಳಗೊಂಡು). ಯೋಜನಾವಾರು ಪ್ರಗತಿಯ ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಿದೆ.
ಇ)	2016 ರ AHP ಗುಂಪು ಮನೆ ಯೋಜನೆ ಅಡಿ ಎಷ್ಟು ಮನೆಗಳ ನಿರ್ಮಾಣ ಕಾರ್ಯ ಪ್ರಾರಂಭವಾಗಿದೆ ಮತ್ತು ಅವು ಯಾವ ಹಂತದಲ್ಲಿದೆ. (ಮಾಹಿತಿ ನೀಡುವುದು)	ಗದಗ-ಬೆಟಗೇರಿ ನಗರಸಭೆ ವ್ಯಾಪ್ತಿಯಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯ AHP ಘಟಕದಡಿ ಒಟ್ಟು 4,722 ಮನೆಗಳನ್ನು ನಿರ್ಮಿಸಲಾಗುತ್ತಿದ್ದು, ಈ ಪೈಕಿ 1,237 ಮನೆಗಳು ಪೂರ್ಣಗೊಂಡಿರುತ್ತವೆ ಹಾಗೂ 2,622 ಮನೆಗಳ ಕಾಮಗಾರಿ Plinth ಹಂತಲ್ಲಿರುತ್ತವೆ. ಬಾಕಿ 863 ಮನೆಗಳ ಕಾಮಗಾರಿಯನ್ನು ಪ್ರಾರಂಭಿಸಬೇಕಾಗಿದೆ. ಯೋಜನಾವಾರು ಪ್ರಗತಿಯ ವಿವರಗಳನ್ನು ಅನುಬಂಧ-2 ರಲ್ಲಿ ಒದಗಿಸಿದೆ.

ಈ)	AHP ಗುಂಪು ಮನೆ ಯೋಜನೆ ಯಾವಾಗ ಪೂರ್ಣಗೊಳ್ಳುತ್ತದೆ ಹಾಗೂ ಮನೆ ಹಂಚಿಕೆ ಯಾವಾಗ ಮಾಡಲಾಗುತ್ತದೆ ? (ವಿವರ ನೀಡುವುದು)	ಗದಗ-ಬೆಟಗೇರಿ ನಗರಸಭೆ ವ್ಯಾಪ್ತಿಯಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯ AHP ಘಟಕದಡಿ ಅನುಷ್ಠಾನಗೊಳ್ಳುತ್ತಿರುವ ಯೋಜನೆಗಳಿಗೆ ಈಗಾಗಲೇ ಸರ್ಕಾರದ ಪಾಲಿನ (ಕೇಂದ್ರ & ರಾಜ್ಯ) ಸಹಾಯಧನವನ್ನು ಬಿಡುಗಡೆಗೊಳಿಸಲಾಗಿದ್ದು, ಬಾಕಿ ಮೊತ್ತವನ್ನು ಫಲಾನುಭವಿಗಳು ತಮ್ಮ ಪಾಲಿನ ವಂತಿಕೆಯಾಗಿ ಪಾವತಿಸಬೇಕಾಗಿರುತ್ತದೆ. ಈ ಹಿನ್ನಲೆಯಲ್ಲಿ ಫಲಾನುಭವಿಗಳ ಪಾಲಿನ ಅನುದಾನದ ಮೊತ್ತವನ್ನು ಬ್ಯಾಂಕ್‌ಗಳಿಂದ ಸಾಲದ ರೂಪದಲ್ಲಿ ಪಡೆದು ಹೊಂದಾಣಿಕೆ ಮಾಡಲು ಉದ್ದೇಶಿಸಲಾಗಿದೆ. ಆದಾಗ್ಯೂ, ಸ್ಥಳೀಯ ಸಂಸ್ಥೆಗಳು ಹಾಗೂ ಅನುಷ್ಠಾನ ಸಂಸ್ಥೆಗಳಾದ ರಾಜೀವ್ ಗಾಂಧಿ ವಸತಿ ನಿಗಮ, ಕರ್ನಾಟಕ ಕೊಳಗೇರಿ ಅಭಿವೃದ್ಧಿ ನಿಗಮವು ಫಲಾನುಭವಿಗಳಿಗೆ ಸಾಲ ಸೌಲಭ್ಯ ಒದಗಿಸಿಕೊಡಲು ಬ್ಯಾಂಕ್ ಗಳೊಂದಿಗೆ ಸಂಪರ್ಕ ಸಾಧಿಸುತ್ತಿವೆ.

ನಗರದ ಹೆಸರು	ಮನೆಗಳ ಸಂಖ್ಯೆ	ಪ್ರಸ್ತುತ ಹಂತ
ಗದಗ ಬೆಟಗೇರಿ	229	ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ 229 ಲಿಡ್ಕರ್ ಫಲಾನುಭವಿಗಳಿಗೆ ಮನೆಗಳನ್ನು ನಿರ್ಮಿಸಲು ಅನುಮೋದನೆಗೊಂಡಿದ್ದು, ಅದರಂತೆ ಸ್ಥಳೀಯ ಸಂಸ್ಥೆಯಿಂದ ಟೆಂಡರ್ ಆಹ್ವಾನಿಸಿ ಗುತ್ತಿಗೆದಾರರಿಂದ ಈಗಾಗಲೇ ಎಲ್ಲಾ 229 ಮನೆಗಳ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿರುತ್ತದೆ. ಆದರೆ ಲಿಡ್ಕರ್ ಸಂಸ್ಥೆಯಿಂದ 229 ಮನೆಗಳನ್ನೂ ಒಳಗೊಂಡಂತೆ ಹಾಗೂ ಈಗಾಗಲೇ HUDCO ಸಂಸ್ಥೆಯಿಂದ ನಿರ್ಮಾಣಗೊಂಡಿರುವ 21 ಮನೆಗಳೂ ಸೇರಿದಂತೆ ಒಟ್ಟು 250 ಮನೆಗಳಿಗೆ ಪ್ರತ್ಯೇಕವಾಗಿ Work Shed ನಿರ್ಮಾಣ ಮಾಡಲು ಅನುಮೋದನೆ ನೀಡಿ ಪ್ರತಿ ಕಾರ್ಯಾಗಾರಕ್ಕೆ ರೂ.2.20 ಲಕ್ಷದಂತೆ ಒಟ್ಟು ರೂ. 5.50 ಕೋಟಿ ಅನುದಾನವನ್ನೂ ಬಿಡುಗಡೆ ಮಾಡಲಾಗಿರುತ್ತದೆ. ಸದರಿ Work Shed ಗಳ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಿ ಮನೆಗಳನ್ನು ಹಂಚಿಕೆ ಮಾಡಲಾಗುವುದು.
ಗದಗ ಬೆಟಗೇರಿ	3630	ಈ ಯೋಜನೆಯಡಿ ಈಗಾಗಲೇ ಎಲ್ಲಾ 3,630 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದ್ದು, ಈ ಪೈಕಿ ಫಲಾನುಭವಿಗಳ ಪಾಲಿನ ಹೆಚ್ಚುವರಿ ಮೊತ್ತವನ್ನು ಬ್ಯಾಂಕ್‌ಗಳಿಂದ ಸಾಲದ ರೂಪದಲ್ಲಿ ಪಡೆಯಲು ಈಗಾಗಲೇ 433 ಫಲಾನುಭವಿಗಳ ಮಾಹಿತಿಯನ್ನು ಬ್ಯಾಂಕ್ ಗಳಿಗೆ ಸಲ್ಲಿಸಲಾಗಿದೆ. ಈ ಪೈಕಿ 170 ಫಲಾನುಭವಿಗಳಿಗೆ ಕೆನರಾ ಬ್ಯಾಂಕ್ ನವರು ಸಾಲ ನೀಡಲು ಸಿದ್ಧರಿರುತ್ತಾರೆ.

		ನಗರದ ಹೆಸರು	ಮನೆಗಳ ಸಂಖ್ಯೆ	ಪ್ರಸ್ತುತ ಹಂತ
		ಗದಗ ಬೆಟಗೇರಿ - KSDB	863	ಈ ಯೋಜನೆಯನ್ನು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಯೋಜನೆಗೆ ದಿನಾಂಕ: 09.09.2021 ರಂದು ಕಾಮಗಾರಿ ಆದೇಶ ನೀಡಲಾಗಿದ್ದು, ಸುಮಾರು 20 ಮನೆಗಳ ನಿರ್ಮಾಣ ಕಾಮಗಾರಿಗೆ ಸಿದ್ಧತೆ ನಡೆಸಲಾಗಿದೆ. ಬ್ಯಾಂಕ್‌ಗಳಿಂದ ಸಾಲ ಪಡೆಯಲು ಈಗಾಗಲೇ 20 ಫಲಾನುಭವಿಗಳ ಮಾಹಿತಿಯನ್ನು ಬ್ಯಾಂಕ್ ಗಳಿಗೆ ಸಲ್ಲಿಸಲಾಗಿದೆ. ಫಲಾನುಭವಿಗಳಿಂದ ವಂತಿಕೆ ಪಡೆದು ಹಾಗೂ ಬಾಕಿ ಮೊತ್ತವನ್ನು ಬ್ಯಾಂಕ್ ಗಳಿಂದ ಸಾಲ ಪಡೆದು ಕಾಮಗಾರಿ ಪೂರ್ಣಗೊಳಿಸಿ ಮನೆ ಹಂಚಿಕೆ ಮಾಡಲಾಗುವುದು.

ಸಂಖ್ಯೆ: ವಇ 64 ಹೆಚ್‌ಎಫ್‌ಎ 2022]

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು

ಅನುಬಂಧ-1

LCQ No 1412
Details of projects approved under BLC in Gadag -Betageri

Sl. No	District Name	City Name	Convergence/ Non convergence	Approved	Foundation	Lintel	Roof	Under Progress	completed	Houses not started
1	Gadag	Gadag-Betigeri	Convergence	1630	156	207	139	502	100	1028
2	Gadag	Gadag-Betigeri	Convergence	1159	178	212	179	569	532	58
3	Gadag	Gadag-Betigeri	Convergence	546	0	183	47	230	120	196
4	Gadag	Gadag-Betigeri	Convergence	306	18	26	21	65	100	141
5	Gadag	Gadag-Betigeri	Convergence	64	0	0	0	0	0	64
Convergence Total				3705	352	628	386	1366	852	1487
1	Gadag	Gadag-Betigeri	Non convergence	93	0	0	0	0	0	93
2	Gadag	Gadag-Betigeri	Non convergence	100	8	0	2	10	4	86
3	Gadag	Gadag-Betigeri	Non convergence	80	8	2	8	18	1	61
4	Gadag	Gadag-Betigeri	Non convergence	412	34	11	14	59	46	307
5	Gadag	Gadag-Betigeri	Non convergence	135	0	0	0	0	0	135
6	Gadag	Gadag-Betigeri	Non convergence	43	4	1	4	9	32	2
Non convergence Total				863	54	14	28	96	83	684
Grand Total				4568	406	642	414	1462	935	2171

(PRAKASH.E.P)
Agm (T)

ಅನುಬಂಧ - 2

AHP Annexure -2 for LAQ No 1412										
SL. No.	CSMC	CSMC Date	Name of the ULB / City	Approved DUs	IA	Completed	Foundation	Lintel	Roof	Under Progress
1	7	18.03.2016	Gadag - Betageri	229	ULB	229	0	0	0	0
2	11	11.08.2016	Gadag - Betageri	3630	ULB	1008	2622	0	0	2622
3	41	27.12.2018	Gadag - Betageri	863	KSDB	0	0	0	0	0
Total				4722	0	1237	2622	0	0	2622